# ರಾಧೇಶ ತೋಳ್ಪಾಡಿ ಎಸ್. ಪದ್ಯಗಳು

## ಮೂಕ ಅಕ್ಷರಗಳ ಬ್ರೇಕಿಂಗ್ ನ್ಯೂಸ್!

ಆಂಗ್ಲ ಭಾಷಾ ದ್ವಿತೀಯಾಕ್ಷರ 'ಬಿ' ಉವಾಚ:
ಸಿಡಿಯದೆ ಹೋಗುವೆ bomb ಒಳಗಿದ್ದೂ
ಕಾಣದೆ ಹೋಗುವೆ thumb ಒತ್ತಿದರೂ
Numbness, dumbness, combಹಿಡಿಯೋಕೂ
ಏನಪ್ಪಾ ಇದು ಈ ಪಾಡು
ಸಾಧ್ಯವೆ ಇಲ್ಲಿ ಬೆಳೆಯೋದು?

ಇದು ನನ್ನೊಬ್ಬನ ಗೋಳಲ್ಲ
c, d, e ಗೂ ಬೆಲೆಯಿಲ್ಲ!
g, h, k, ಅರೆ! ಹೆಚ್ಚೇಕೆ?
l, n, p ಗೂ ನೆಲೆಯಿಲ್ಲ!
ಲಂಡನ್‌ನಲ್ಲೇ ಹೀಗಾದ್ರೆ
ಕಂಡೋರ್ನಂದು ಸುಖವಿಲ್ಲ!

Thick ಆಗಿದ್ರೂ sick ಆಗಿದ್ರೂ
quick ಇಲ್ವೇನು 'c' ಹುಡುಗಿ ?
ಏನಾಗಿದ್ರೂ ದೊಡ್ಡೋರ್ ಹಿಂದೆ
ನಿಲ್ಲುವ ದುಸ್ಥಿತಿ ಛಿ! ಛಿ! ಛಿ!

Bridge ಲಿ edge ಲಿ ಕೂತಿರ್‍ತಾನೆ
'd' ಬಾಸ್ ಪಾಪ ಯಾವಾಗ್ಲೂ!
Cambridge ಕೂಸಿಗೆ Knowledge ಇದ್ರೂ
ಗೌರವ ಕೊಡುವರೆ ಯಾರಾದ್ರೂ?




ತೆಳ್ಳಗೆ ಬೆಳ್ಳಗೆ ಬಳುಕುವ ಬಾಲೆ
Rose ಜೊತೆ ಬರುವ e–ಈಕೆ
Face ಲಿ Nose ಲಿ ಫಳಫಳ ಹೊಳಪಿದೆ
ನೋಡದೆ ಹೋಗುವಿರದು ಯಾಕೆ ?
ಗಣಪತಿ ಭಟ್ಟರ ಕಷ್ಟವೇ ಬೇರೆ
'ಗ' ನೋ 'ಜ' ನೋ ತಾನು?
Foreign ಗ್ಲೋಗಿ sign ಮಾಡಿದ್ರೂ
ಹೋಗದು ಬೆನ್ನಿನ ಗೂನು!

I know, I know, knee, knife ಅಂದ್ರೆ
ಮುಸಿ ಮುಸಿ ನಗುತೀರಲ್ಲ?

'ಮೊಣಕಾಲ್‌ವರೆಗೇ ನೀರು ಬರೋದೇ...'
e ಬಡಕೊಂಡಿದೆ ಗಲ್ಲ!

Palm ಲಿ calm ಆಗಿರುವನು ಟ ಉ
Talking ಮಾಡಿಯೂ ಮೂಕ!
Walking ನಲ್ಲೂ ಗುಮ್ಮನ ತಮ್ಮ
ಇದ್ದರೂ ಇಲ್ಲದ ಲೆಕ್ಕ!

N ಹುಡುಗಂದೂ ನಾಯೀ ಪಾಡು
ಹೇಳೋರ್ ಕೇಳೋರ್ ಯಾರಿಲ್ಲ!
Autumn ನಲ್ಲಿ Solemn ಆಗಿ
Damn it ಅಂದರೂ ಕ್ಯಾರಿಲ್ಲ!

ನೋಡ್ತಾ ಹೋದರೆ ಕತೆ ಗಂಭೀರ
p, r ಪಾಡೂ ಹೀಗೇನೇ!
s, t, w ಅಷ್ಟೇ ಏಕೆ
u, y ಎಲ್ರಿಗೂ ಬೇಗೇನೇ!

ಸ್ವಂತ ಪಕ್ಷದಲೇ ಇಂಥವಮಾನ
ಇರುವುದೆ ಇಲ್ಲೇ ಇನ್ನೂನು?
ಜೀಸಸ್, ನಮ್ಮನು ಮನ್ನಿಸು, ಹರಸು
ತೊರೆವೆವು ಇಂಗ್ಲೆಂಡ್ ದೇಶವನು!

ಚೆನ್ನದ ನಾಡಿಗೆ ಹೊರಟೆವು ನಾವು
ಕನ್ನಡ ಅಕ್ಷರವಾಗಲಿಕೆ!
ಅಲ್ಲೆಲ್ಲರಿಗೂ ಸ್ವಂತದ ಛಾಪು
ವ್ಯಷ್ಟಿ–ಸಮಷ್ಟಿಯ ಬೆಳಗಲಿಕೆ! ■



## ರಾತ್ರಿ ಶಾಲೆಯ ಮುಖ್ಯೋಪಾಧ್ಯಾಯರಿಗೆ

ಚಂದ್ರ, ಚುಕ್ಕಿ ಮಕ್ಕಳಿಗೆ ಏಕೋಪಾಧ್ಯಾಯ!
ಹ್ಯಾಗೆ ಅಷ್ಟೊಂದ್ ಮಕ್ಳನ್ನ ಮ್ಯಾನೇಜ್ ಮಾಡ್ತೀಯಾ?

ಕೇಳ್ತಿದ್ದಾರೆ ಎಲ್ರೂ ಪಾಠ ಪಿಳಿಪಿಳಿ ನೋಡುತ್ತಾ!
ಹಾಡ್ತಿದ್ದಾರೆ ಯಾವುದೇ ಚಂದದ ಹಾಡನು ಹಾಡುತ್ತಾ!

ಸಮಯ ಸಿಗುತ್ತಾ ತಿದ್ದೋದಕ್ಕೆ ಎಲ್ಲರ ಕಾಪೀನ?
ಪೆಟ್‌ಗಿಟ್ ಕೊಟ್ಟು ಕೂರಿಸ್ತೀಯಾ ತರಲೆ ಕೋತೀನ?

ಮೋಡದ ಒಳಗಿನ ಆಫೀಸ್ನಲ್ಲಿ ಬ್ಯಾಗನ್ನಿಡ್ತೀಯಾ?
ಲಂಚ್ ಬ್ರೇಕಲ್ಲಿ ಅಲ್ಲೇ ಹೋಗಿ ಊಟ ಮಾಡ್ತೀಯಾ?

ಬರ್ಲಾ ನಾನೂ ಬಾನಿನ ಸ್ಕೂಲಿಗೆ, ಫೀಸು ಭಾರೀನ?
ಹೋಂವರ್ಕ್ ಮಾತ್ರ ಕೊಡಬೇಡಪ್ಪ ಪ್ರೀತಿಯ ಚಂದ್ರಾಮ! ■

ಚಿತ್ರಗಳು: ವಿಜಯ ಕುಮಾರಿ